OS 98/15
DW-2

ಸಾಕ್ಷಿಯ ಹೆಸರುಃ ನಾರಯಣರೆಡ್ಡಿ

ದಿನಾಂಕಃ 08-02-2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟೀ ಸವಾಲು</u> ಶ್ರೀ ಎಸ್ ಆರ್ ಆರ್ ವಕೀಲರಿಂದಃ

1 ನೇ ಪ್ರತಿವಾದಿ ನನ್ನ ಸಂಬಂದಿ ಎಂದರೆ ಸರಿ. ಒಂದನೇ ಪ್ರತಿವಾದಿ ಕಡೆಯಿಂದ ನಮಗೆ ಆಸ್ತಿ ಬಂದಿದೆ. ದಾವಾ ಸ್ವತ್ತನ್ನು ನೋಡಿದ್ದೇನೆ. ದಾವಾ ಸ್ವತ್ತಿನ ಸರ್ವೆ ನಂ. 50, ವಿಸ್ತೀರ್ಣ 10 ಎಕರೆ ಇರಬಹುದು. ದಾವಾ ಸ್ವತ್ತಿನ ಪೂವರ್ಕ್ಕೆ ಎ.ಪಿ. ನಾರಾಯಣಪ್ಪ, ಪಶ್ಚಿಮಕ್ಕೆ ದೊಡ್ಡನರಸಿಂಹಪ್ಪ ಮತ್ತು ಆತನ ಮಕ್ಕಳು, ಉತ್ತರಕ್ಕೆ ಪಿ.ಮಾದರೆಡ್ಡಿ, ದಕ್ಷಿಣಕ್ಕೆ ನರಸಯ್ಯ ಅವರ ಜಮೀನು ಇದೆ. ಪೂರ್ವದ ನಾರಾಯಣಪ್ಪ ಅವರ ಜಮೀನಿನ ಸರ್ವೆ ನಂಬರ್ 47 ವಿಸ್ತೀರ್ಣ 5 ಎಕರೆ. ದೊಡ್ಡನರಸಿಂಹಪ್ಪ ರವರ ಜಮೀನು ಸರ್ವೆ ನಂಬರ್ ಖಚಿತವಾಗಿ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಸರ್ವೆ ನಂಬರ್ 51 ಇರಬಹುದು ಎಂದು ಹೇಳುತ್ತಾರೆ. ಮಾದರೆಡ್ಡಿ ಮತ್ತು ನರಸಯ್ಯ ಇವರ ಜಮೀನುಗಳ ಸರ್ವೆ ನಂಬರ್ ಮತ್ತು ವಿಸ್ತೀರ್ಣ ಗೊತಿಲ್ಲ. ನಾರಯಣಪ್ಪರವರ ಜಮೀನಿನ ಪೂರ್ವಕ್ಕೆ ಮಲ್ಲಯ್ಯ ಅವರ ಜಮೀನು ಇದೆ. ಅದರ ಸರ್ವೆ ನಂಬರ್ ಮತ್ತು ವಿಸ್ತೀರ್ಣ ಗೊತ್ತಿಲ್ಲ. ಮಾದರೆಡ್ಡಿ ನರಸಯ್ಯ ಮತ್ತು ದೊಡ್ಡನರಸಿಂಹಪ್ಪ ರವರ ಜಮೀನುಗಳ ಚೆಕ್ಕುಬಂದಿ ಸರ್ವೆ ನಂವರ್ ಮತ್ತು ವಿಸ್ತೀರ್ಣ ಗೊತ್ತಿಲ್ಲ.

ಸರ್ವೆ ನಂಬರ್ 30/1 ದಾವಾ ಸ್ವತ್ತಿನಿಂದ 1 ಕಿ.ಮಿ. ದೂರ ಇದೆ ಎಂದರೆ ಸರಿಯಲ್ಲ. ಸಾಕ್ಷಿ

ಮುಂದುವರೆದು 1 ಫರ್ಲಾಂಗ್ ದೂರ ಇದೆ ಎಂದು ಹೇಳುತ್ತಾರೆ. ಸದರಿ ಫರ್ಲಾಂಗ್ ಒಳಗೆ ಹತ್ತು ಜನರ ಜಮೀನುಗಳು ಇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದ 3–4 ಜನರ ಜಮೀನುಗಳು ಇವೆ ಎಂದು ಹೇಳುತ್ತಾರೆ. ದಾವಾ ಸ್ವತ್ತಿಗೆ ಹೊಂದಿಕೊಂಡತೆ ನನ್ನ ಜಮೀನು ಇಲ್ಲ. ದಾವಾಸ್ವತ್ತಿನ ಪೂರ್ವದ ನಾರಾಯಣಪ್ಪ ರವರ ಜಮೀನನ್ನು ನಾನೆ ಉಳುವೆ ಮಾಡುತ್ತೇನೆ. ನನಗೆ 13 ಎಕರೆ ಜಮೀನು ಇತ್ತು ಅದರಲ್ಲಿ 6 ಎಕರೆ ಮಾರಾಟ ಮಾಡಿದ್ದೇನೆ. ಈಗ 7 ಎಕರೆ ಇದೆ. 13 ಎಕರೆ ಜಮೀನನ್ನು ಉಳುವೆ ಮಾಡಲು ಆಗದ ಕಾರಣ ಜಮೀನು ಮಾರಾಟ ಮಾಡಿದ್ದೇನೆ ಎಂದರೆ ಸರಿಯಲ್ಲ. ಉಳಿದ 7 ಎಕರೆಯಲ್ಲಿ ಬೆಳೆಯುತ್ತಿದ್ದೇನೆ. ನನಗೆ ಸಾಕಷ್ಟು ಜಮೀನು ಇರುವ ಕಾರಣ ಮತ್ತೊಬ್ಬರ ಜಮೀನು ಉಳುಮೆ ಮಾಡುವ ಅವಶ್ಯಕತೆ ನನಗೆ ಇಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿಯರಿಗೆ 25 ಎಕರೆ ಜಮೀನು ಇರಬಹುದು. ಸದರಿ ಜಮೀನು 2 ಕಡೆ ಇದೆ. ಸದರಿ ಸ್ವತ್ತುಗಳ ಚಕ್ಕುಬಂದಿ, ಸರ್ವೆ ನಂಬರ್, ಮತ್ತು ವಿಸ್ತೀರ್ಣ ನನಗೆ ಗೊತ್ತಿಲ್ಲ. ಪ್ರತಿವಾದಿಯರು ಕೆಲವು ಜಮೀನುಗಳನ್ನು ಹಂಚಿಕೊಂಡಿದ್ದಾರೆ ಉಳಿದ ಜಮೀನುಗಳು ಒಟ್ಟಾಗಿ ಇವೆ. ಹಂಚಿಕೊಂಡ ಜಮೀನುಗಳ ಸರ್ವೆ ನಂಬರ್, ವಿಸ್ತೀರ್ಣ ಮತ್ತು ಚಕ್ಕುಬಂದಿ ಗೊತ್ತಿಲ್ಲ. ಅದೇ ರೀತಿ ಹಂಚಿಕೊಳ್ಳದೆ ಇರುವ ಜಮೀನುಗಳ ಸರ್ವೆ ನಂಬರ್, ವಿಸ್ತೀರ್ಣ ಮತ್ತು ಚಕ್ಕುಬಂದಿ ನನಗೆ ಗೊತ್ತಿಲ್ಲ. ಪ್ರತಿವಾದಿಯರ ಮನೆಯ ವ್ಯವಹಾರ ವೈಯಕವಾಗಿ ನನಗೆ ಗೊತ್ತು. ಪ್ರತಿವಾದಿಯರು ಬೇರೆ ಬೇರೆ ಇದ್ದಾರೆ. ನೀರಾವರಿ ಜಮೀನು ಹಂಚಿಕೊಂಡಿದ್ದಾರೆ. ಉಳಿದ ಜಮೀನು ಪ್ರತಿವಾದಿಯರ ತಾತನ ಹೆಸರಿನಲ್ಲಿ ಇದೆ.

ಪ್ರತಿವಾದಿಯರ ತಾತನ ಹೆಸರು ಸಿಂಬರೆಡ್ಡಿ . ರಂಗಾರೆಡ್ಡಿಯವರ ತಾತ ಹನುಮಪ್ಪ. ಪ್ರತಿವಾದಯರ ತಾತ ಹನುಮಪ್ಪನ ಹೆಸರಿನಲ್ಲಿ ಹಿಂದೆ ಜಮೀನು ಇತ್ತಾ ಎಂದರೆ ಆತನ ಅಣ್ಣ ಸಿಂಬರೆಡ್ಡಿ ಹೆಸರಿನಲ್ಲಿ ಇತ್ತು ಎಂದು ಹೇಳುತ್ತಾರೆ. ಹನುಮಪ್ಪನ ಹೆಸರಿನಲ್ಲಿ ದಿಣ್ಣೆ ಜಮೀನುಗಳು ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸಿಂಬರೆಡ್ಡಿಯನ್ನು ನಾನು ನೋಡಿಲ್ಲ. ಆತನ 3 ಜನ ತಮ್ಮಂದಿರನ್ನು ನೋಡಿದ್ದೇನೆ. ದಾವಾ ಸ್ವತ್ತನ್ನು ಸಿಂಬರೆಡ್ಡಿಗೆ ಸರ್ಕಾರದವರು ದರಖಾಸ್ತು ಮೂಲಕ ಕೊಟ್ಟಿದ್ದರು ಎಂದರೆ ಸರಿ. ಸಿಂಬರೆಡ್ಡಿ ಮಗಳು ಚಿನ್ನಕ್ಕ ಇವಳನ್ನು ನೋಡಿದ್ದೇನೆ. ಚಿನ್ನಕ್ಕ ಹುಟ್ಟಿದ್ದು ಮತ್ತು ಮದುವೆಯಾಗಿದ್ದು ಪರತಿ ಹಳ್ಳಿಯಲ್ಲಿ ಎಂದರೆ ಸರಿ. ಚಿನ್ನಕ್ಕ ದಾವಾ ಸ್ವತ್ತುಗಳನ್ನು ಉಳುಮೆ ಮಾಡುತ್ತಿದ್ದಳು ಎಂದರೆ ಸರಿಯಲ್ಲ. ಚಿನ್ನಕ್ಕ ತೀರಿ ಹೋದ ನಂತರ ಅವಳ ಮಕ್ಕಳಾದ ವಾದಿಯರು ದಾವಾ ಸ್ವತ್ತುಗಳಲ್ಲಿ ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರು ದಾವಾ ಸ್ವತ್ತುಗಳ ಸ್ವಾಧೀನದಲ್ಲಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ವಾದಿಯರಿಗೆ ಯಾವುದೇ ಹಕ್ಕು ಇಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 30/1 ದಾವಾ ಸ್ವತ್ತಿನ ಪಕ್ಕದಲ್ಲಿದೆ ಮತ್ತು ನಾನು ಅದನ್ನು ಉಳುಮೆ ಮಾಡಲು ಹೋಗುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ನಮ್ಮ ಸಂಬಂದಿಗಳು ಮತ್ತು ಅವರಿಂದ ನಮಗೆ ಆಸ್ತಿ ಬಂದಿಂದೆ ಆ ಕಾರಣಕ್ಕೆ ಅವರ ಪರವಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

OS 98/15
DW-2

(ತೆ. ನ್ಯಾ.ನ. ಉ. ಲೇ. ಬೆ. ಮಾ.)

ಓ.ಹೇ.ಕೇ. ಸ.ಇ.

ಅಧಿಕ ಹಿರಿಯ ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ
ಮಧುಗಿರಿ